# ಮಲಬಾರ್ ಮಾಪಿಳ್ಳೆ ಬಂಡಾಯಗಳು: ಧರ್ಮ, ಭೂಮಿ ಮತ್ತು ಹಕ್ಕುಗಳಿಗಾಗಿ ಹೋರಾಟ

ದಿನೇಶ ಎನ್.ಎನ್.

ಸಂಶೋಧನಾರ್ಥಿ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

DOI: https://doi.org/10.5281/zenodo.15124098

## ABSTRACT:

19ನೆಯ ಶತಮಾನದಾದ್ಯಂತ ಸ್ಫೋಟಗೊಂಡು 20ನೇಯ ಶತಮಾನದ ಮೊದಲ ಭಾಗವು ಉಗ್ರ ಹೋರಾಟದೊಂದಿಗೆ ಅಳಿದುಹೋದವು. ಕೇರಳದ ಮಲಬಾರ್ ಪ್ರದೇಶದಲ್ಲಿ ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆಯ ವಿರುದ್ಧ ಪ್ರತಿರೋಧವಾಗಿ ಪ್ರಾರಂಭವಾಯಿತು. ಮಲೆಯಾಳಿ ಸಮಾಜದ ಜೊತೆಗಿನ ಅರಬರ ವ್ಯಾಪಾರೀ ಸಂಬಂಧದ ಚರಿತ್ರೆ ಸುಮಾರು 9ನೇ ಶತಮಾನದಷ್ಟು ಹಿಂದಿನಿಂದ ಪ್ರಾರಂಭವಾಗುತ್ತದೆ. ಕರಾವಳಿ ಪ್ರಾಂತ್ಯದಲ್ಲಿದ್ದ ಹಿಂದೂ ಮುಖಂಡರುಗಳಿಗೆ ಶ್ರೀಮಂತ ಅರಬ ವ್ಯಾಪಾರಿಗಳ ಬೆಂಬಲ ಯಾವಾಗಲೂ ಬೇಕಾಗುತ್ತಿತ್ತು. ಮಲಬಾರಿನಲ್ಲೇ ಕ್ರಮೇಣ ಉಳಿದುಕೊಂಡ ಅರಬ ವ್ಯಾಪಾರಿಗಳು ಪ್ರಮುಖವಾಗಿ ನಾಯರ್ ಮತ್ತು ತಿಯಾ ಜಾತಿಯ ಹೆಂಗಸರನ್ನೇ ಮದುವೆಯಾದರು. ಕಾಲಾಂತರದಲ್ಲಿ ಇವರೇ ಮಾಪಿಳ್ಳೆಗಳಾದರು. ಮತಾಂತರಗೊಂಡು ಹೊಸದಾಗಿ ಸೇರ್ಪಡೆಗೊಳ್ಳುವ ಪ್ರತಿಯೊಬ್ಬ ಸದಸ್ಯನನ್ನು ಮಾಪಿಳ್ಳೆಗಳು ಸಂತೋಷದಿಂದ ಸ್ವೀಕರಿಸಿದರೂ ಮೇಲ್ಜಾತಿಯ ಹಿಂದೂಗಳು ಮಾತ್ರ ಅವರನ್ನು ಅಸ್ಪೃಶ್ಯರಂತೆ ನಡೆಸಿಕೊಳ್ಳುತ್ತಿದ್ದರು. ತಮ್ಮ ಆರ್ಥಿಕ ಹಿತಾಸಕ್ತಿಗಳನ್ನು ಬಲಪಡಿಸಿಕೊಳ್ಳಲು ಕೆಲವು ಮಾಪಿಳ್ಳೆ ರೈತರು 1785ರಲ್ಲಿ ಭೂಕಂದಾಯ ಹೇರಿಕೆಯನ್ನು ಪ್ರತಿಭಟಿಸಿ ಟಿಪ್ಪುವಿನ ವಿರುದ್ಧದ ದಂಗೆಯಾಗಿರುವುದು. ಬ್ರಿಟೀಷರು ಮಲಬಾರ್ ಪ್ರಾಂತದಲ್ಲಿದ್ದ ಭೂಸ್ವಾಮ್ಯದ ಹಕ್ಕುಗಳನ್ನು ಅರ್ಥೈಸಿಕೊಂಡ ರೀತಿ ಮತ್ತು ಹೊಸ ಕಾನೂನುಗಳನ್ನು ಜಾರಿಗೊಳಿಸಿದ ಕ್ರಮಗಳೇ ಮಾಪಿಳ್ಳೆಗಳು ದಂಗೆಯೇಳಲು ಕಾರಣವಾಗಿವೆ. ಹಕ್ಕುಗಳ ಪುನರ್ ಸ್ಥಾಪನೆಯ ಈ ಬ್ರಿಟಿಷ್ ನೀತಿಯನ್ನು 'ಒಳ್ಳೆಯ ಸರಕಾರದ ಉನ್ನತ ಸಾಧನೆ ಹಾಗೂ ಉತ್ತಮ ಭವಿಷ್ಯಕ್ಕೆ ಭರವಸೆ' ಎಂಬುದಾಗಿ ಪ್ರಚಾರ ಮಾಡಲಾಯಿತು. ಸಾಮಾಜಿಕ ವ್ಯವಸ್ಥೆಗೆ ಖಿಲಾಫತ್ ಎನ್ನುವ ಶಬ್ದ ಆಗ ಅನ್ವಯವಾದ ನೆಲೆಯಲ್ಲಿ ಭಾವನಾತ್ಮಕ, ಆವೇಶಯುಕ್ತ ಮತ್ತು ಕ್ರಾಂತಿಕಾರೀಯಾಗಿತ್ತು. ಮಲಬಾರ್‌ನಲ್ಲಿ ದೀರ್ಘಕಾಲೀನ ರೈತ ಸಂಘರ್ಷಗಳು ನಡೀತಿದ್ದರೂ ಕೂಡಾ, ದಮನಿತ ಮೋಪ್ಲಾ ರೈತರು ಪ್ರವಾದಿಯ ಮನವಿಯ ಹೊರತು ಬಂಡೇಳುವುದು ಅಸಾಧ್ಯವಾಗಿತ್ತು.

## KEYWORDS:

ಭೂಹಂಚಿಕೆ ವ್ಯವಸ್ಥೆ, ಭೂಸ್ವಾಮ್ಯದ ಹಕ್ಕುಗಳು, ಮಲಬಾರ್‌ನಲ್ಲಿ ರೈತ ಸಂಘರ್ಷಗಳು.

**ಪೀಠಿಕೆ:**

1921ರ ಮಲಬಾರ್ ದಂಗೆಯು (ಮೊಪ್ಲಾ ದಂಗೆಗಳು, ಮಾಪ್ಪಿಲ ಗಲಭೆಗಳು ಎಂದೂ ಕರೆಯಲ್ಪಡುತ್ತದೆ) ಕೇರಳದ ಮಲಬಾರ್ ಪ್ರದೇಶದಲ್ಲಿ ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆಯ ವಿರುದ್ಧ ಪ್ರತಿರೋಧವಾಗಿ ಪ್ರಾರಂಭವಾಯಿತು. ಜನಪ್ರಿಯ ದಂಗೆಯು ಗಣ್ಯ ಹಿಂದೂಗಳಿಂದ ನಿಯಂತ್ರಿಸಲ್ಪಟ್ಟ ಚಾಲ್ತಿಯಲ್ಲಿರುವ ಊಳಿಗಮಾನ್ಯ ವ್ಯವಸ್ಥೆಯ ವಿರುದ್ಧ ಮತ್ತು ಖಿಲಾಫತ್ ಚಳವಳಿಯ ಪರವಾಗಿಯೂ ಇತ್ತು. ಹಿಂದೂ ಭೂಮಾಲೀಕರ ಮತ್ತು ಬ್ರಿಟೀಷರ ವಿರುದ್ಧ ಹತ್ತೊಂಬತ್ತನೆಯ ಶತಮಾನದಾದ್ಯಂತ ಅನೇಕ ಮಾಪಿಳ್ಳೆ ದಂಗೆಗಳು ಸ್ಫೋಟಗೊಂಡವು. ಇಪ್ಪತ್ತನೆಯ ಶತಮಾನದ ಮೊದಲಲ್ಲಿ ಕೊನೆಗೊಂಡ ಈ ಹೋರಾಟಗಳು, ಅಂತಿಮ ಹಂತದಲ್ಲಂತೂ ಸಂಪೂರ್ಣ ಸಶಸ್ತ್ರವೂ, ಹೆಚ್ಚೆಚ್ಚು ತೀವ್ರವೂ, ಸುಸಂಘಟಿತವೂ ಆಗಿದ್ದವು.

ಮಲೆಯಾಳಿ ಸಮಾಜದ ಜೊತೆಗಿನ ಅರಬರ ವ್ಯಾಪಾರೀ ಸಂಬಂಧದ ಚರಿತ್ರೆ ಸುಮಾರು 9ನೇ ಶತಮಾನದಷ್ಟು ಹಿಂದಿನಿಂದ ಪ್ರಾರಂಭವಾಗುತ್ತದೆ. ಕರಾವಳಿ ಪ್ರಾಂತ್ಯದಲ್ಲಿದ್ದ ಹಿಂದೂ ಮುಖಂಡರುಗಳಿಗೆ ಶ್ರೀಮಂತ ಅರಬ ವ್ಯಾಪಾರಿಗಳ ಬೆಂಬಲ ಯಾವಾಗಲೂ ಬೇಕಾಗುತ್ತಿತ್ತು. ಇಂತಹ ಅರಬರು ತಮ್ಮ ವ್ಯಾಪಾರ ವ್ಯವಹಾರದಲ್ಲಿ ಧಾರಾಳವಾಗಿ ರಿಯಾಯಿತಿ ಪಡೆಯುತ್ತಿದ್ದರು. 'ಮಲಬಾರಿನಲ್ಲೇ ಕ್ರಮೇಣ ಉಳಿದುಕೊಂಡ ಅರಬ ವ್ಯಾಪಾರಿಗಳು ಪ್ರಮುಖವಾಗಿ ನಾಯರ್ ಮತ್ತು ತಿಯಾ ಜಾತಿಯ ಹೆಂಗಸರನ್ನೇ ಮದುವೆಯಾದರು. ಕಾಲಾಂತರದಲ್ಲಿ ಇವರೇ ಮಾಪಿಳ್ಳೆಗಳಾದರು.' ಅನಂತರ ಮಾಪಿಳ್ಳೆ ಜನಸಂಖ್ಯೆ ಏರುತ್ತಾ ಬಂದಿತು. ಲೈಂಗಿಕ ಕಟ್ಟುಕಟ್ಟಳೆಗಳನ್ನು ಮೀರುವ ತಿಯಾ ಹೆಂಗಸರನ್ನು ಕೆಲವೊಮ್ಮೆ ಮಾಪಿಳ್ಳೆಗಳಿಗೆ ಮಾರಲಾಗುತ್ತಿತ್ತು.[1] ಮತಾಂತರಗೊಂಡು ಹೊಸದಾಗಿ ಸೇರ್ಪಡೆಗೊಳ್ಳುವ ಪ್ರತಿಯೊಬ್ಬ ಸದಸ್ಯನನ್ನು ಮಾಪಿಳ್ಳೆಗಳು ಸಂತೋಷದಿಂದ ಸ್ವೀಕರಿಸಿದರೂ ಮೇಲ್ಜಾತಿಯ ಹಿಂದೂಗಳು ಮಾತ್ರ ಅವರನ್ನು ಅಸ್ಪೃಶ್ಯರಂತೆ ನಡೆಸಿಕೊಳ್ಳುತ್ತಿದ್ದರು.

**ವ್ಯವಸಾಯೀ ಸಂಘರ್ಷ:**

ಶ್ರೇಣೀಕೃತ ಸಮಾಜ ವ್ಯವಸ್ಥೆಯ ಅತ್ಯಂತ ಕೆಳಗಿನ ಸ್ತರದಲ್ಲಿದ್ದ ಚೆರುಮಾರ್ ಜನಾಂಗಕ್ಕೆ ಮತಾಂತರ ಸಾಮಾಜಿಕವಾಗಿ ಚಲನಶೀಲತೆಯ ಸಾಧ್ಯತೆಯನ್ನು ತೆರೆದಿಟ್ಟಿತು. ಭೂಹೀನರಾಗಿದ್ದ ಇವರು ಶತಮಾನಗಳ ಕಾಲ ಪ್ರಮುಖ ಭೂಮಾಲೀಕ ವರ್ಗದ ಹೊಲಗಳಲ್ಲಿ ಜೀತದಾಳುಗಳಾಗಿದ್ದರು. ಈ ಚೆರುಮಾರ್ ಜೀತದಾಳುಗಳು ಒಮ್ಮೊಮ್ಮೆ ಭೂಮಿಯ ಸಮೇತ, ಕೆಲವೊಮ್ಮೆ ಭೂಮಿರಹಿತವಾಗಿ ಮಾರಲ್ಪಡುತ್ತಿದ್ದರು ಅಥವಾ ಗಿರವಿಯಾಗಿ ಒತ್ತೆ ಇಡಲ್ಪಡುತ್ತಿದ್ದರು. ಇಸ್ಲಾಂಗೆ ಮತಾಂತರ ಹೊಂದುವ ಮೂಲ ಅವರು ಈ ಜೀತದಿಂದ ಮುಕ್ತಿ ಪಡೆದುದಲ್ಲದೆ, ಸಾಮಾಜಿಕವಾಗಿ ತಮ್ಮ ಸ್ಥಾನಮಾನಗಳನ್ನು ಏರಿಸಿಕೊಂಡರು. ಸವರ್ಣೀಯ ಹಿಂದೂಗಳಿಂದ ಪ್ರತೀಕಾರದ

ಭಯವೂ ಅವರಿಗೆ ದೂರವಾಯಿತು. ಮತಾಂತರಗೊಂಡ ಇವರಿಗೆ, ಸುಸಂಘಟಿತವಾದ ಮಾಪಿಳ್ಳೆ ಜನಾಂಗದಿಂದ ಸಹಾನುಭೂತಿ ಮತ್ತು ರಕ್ಷಣೆ ಎರಡೂ ದೊರೆಯಿತು. ಆದರೆ ಇಲ್ಲಿ ಅತಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಮಾಪಿಳ್ಳೆಗಳು ಈ ಸಂದರ್ಭವನ್ನು ತಮ್ಮ ಆರ್ಥಿಕ ಹಿತಾಸಕ್ತಿಗಳನ್ನು ಬಲಪಡಿಸಿಕೊಳ್ಳಲು ಕೆಲವು ಮಾಪಿಳ್ಳೆ ರೈತರು 1785ರಲ್ಲಿ ಭೂಕಂದಾಯ ಹೇರಿಕೆಯನ್ನು ಪ್ರತಿಭಟಿಸಿ ಟಿಪ್ಪುವಿನ ವಿರುದ್ಧ ದಂಗೆ ಎದ್ದಿರುವುದು.[2] ಏಕೆಂದರೆ, ಮಾಪಿಳ್ಳೆ ರೈತರಿಗೂ ಈ ಕಂದಾಯ ನೀತಿಯಿಂದ ವಿನಾಯಿತಿ ಇದ್ದಿರಲಿಲ್ಲ. 1790ರಲ್ಲಿ ಟಿಪ್ಪುವಿಗೂ ಬ್ರಿಟಿಷರಿಗೂ ಯುದ್ಧ ಪ್ರಾರಂಭವಾಯಿತು. ಟಿಪ್ಪುವಿನ ಸೋಲಿನ ನಂತರ 1792ರಲ್ಲಿ ಮಲಬಾರ್ ಪ್ರಾಂತವು ಬ್ರಿಟಿಷ್ ಅಧಿಪತ್ಯಕ್ಕೆ ಸೇರ್ಪಡೆಯಾಯಿತು. ತಿರುರಂಗಡಿ ಎಂಬಲ್ಲಿ ಬ್ರಿಟೀಷರ ವಿರುದ್ಧ ಕೊನೆಯ ಉಗ್ರ ಹಾಗೂ ನಿರ್ಣಾಯಕ ಹೋರಾಟ ನಡೆಯಿತು. ಇದರಲ್ಲಿ ಸಹಸ್ರಾರು ಮಾಪಿಳ್ಳೆಗಳು ಪ್ರಾಣ ಕಳೆದುಕೊಂಡರು. ಅನಂತರ ತಿರುರಂಗಡಿಯು ಮಾಪಿಳ್ಳೆಗಳಿಗೆ ಒಂದು ಯಾತ್ರಾ ಸ್ಥಳವಾಗಿ ಮಾರ್ಪಟ್ಟಿತು. ಈ ಹೋರಾಟ ಮಾಪಿಳ್ಳೆಗಳ ಮನಸ್ಸಿನಲ್ಲಿ ಕಹಿ ನೆನಪುಗಳನ್ನು ಬಿಟ್ಟಿರಬಹುದಾದ ಸಾಧ್ಯತೆಗಳಿರುವುದು ಕಂಡುಬರುತ್ತದೆ.

ಮಲಬಾರಿನಲ್ಲಿದ್ದ ಬೇರೆ ಬೇರೆ ವರ್ಗಗಳ ಆಸ್ತಿ ಹಕ್ಕು ಬ್ರಿಟಿಷ್ ಅಧಿಕಾರಿಗಳಿಗೆ ಮೊದಮೊದಲು ತುಂಬ ಆತಂಕ ಹುಟ್ಟಿಸುವ ಪ್ರಶ್ನೆಯಾಗಿತ್ತು. ನಾಯರ್ ಮತ್ತು ನಂಬೂದಿರಿಗಳು ಈಗ ಮೊದಲಿನ ಸ್ಥಳಕ್ಕೆ ವಾಪಸಾಗಿ ತಮ್ಮ ಹಕ್ಕನ್ನು ಪುನಃ ಸ್ಥಾಪಿಸಿಕೊಳ್ಳತೊಡಗಿದರು. ಆದರೆ, ಅವರ ಗೈರುಹಾಜರಿಯಲ್ಲಿ ಮಾಪಿಳ್ಳೆಗಳು ಅವರ ಭೂಮಿಯನ್ನು ವಶಪಡಿಸಿಕೊಂಡರು. ಮೈಸೂರು ಸಂಸ್ಥಾನದ ಆಳ್ವಿಕೆಯ ಸಣ್ಣ ಅವಧಿಯಲ್ಲಿ ಗೊಂದಲಕ್ಕೊಳಗಾದ ಬೇರೆ ಬೇರೆ ವರ್ಗಗಳ ಭೂಸ್ವಾಮ್ಯದ ಹಕ್ಕುಗಳನ್ನು ಬ್ರಿಟಿಷ್ ಆಡಳಿತ ಸರಿಪಡಿಸಿ ಲಾಗಾಯ್ತಿನ ಕಾನೂನುಗಳನ್ನೇ ಜಾರಿಗೊಳಿಸಲು ಪ್ರಯತ್ನಿಸಿತು. ಹೀಗಾಗಿ ಬ್ರಿಟೀಷರು ಮಲಬಾರ್ ಪ್ರಾಂತದಲ್ಲಿದ್ದ ಭೂಸ್ವಾಮ್ಯದ ಹಕ್ಕುಗಳನ್ನು ಅರ್ಥೈಸಿಕೊಂಡ ರೀತಿ ಮತ್ತು ಹೊಸ ಕಾನೂನುಗಳನ್ನು ಜಾರಿಗೊಳಿಸಿದ ಕ್ರಮಗಳೇ ಮಾಪಿಳ್ಳೆಗಳು ದಂಗೆಯೇಳಲು ಕಾರಣವಾದ ಸನ್ನಿವೇಶಗಳ ಬಗ್ಗೆ ಸಾಕಷ್ಟು ಮಾಹಿತಿ ಕೊಡುತ್ತವೆ.

ಈ ದಂಗೆಗಳು 19ನೇಯ ಶತಮಾನದಾದ್ಯಂತ ಸ್ಫೋಟಗೊಂಡು 20ನೇಯ ಶತಮಾನದ ಮೊದಲ ಭಾಗದ ಉಗ್ರ ಹೋರಾಟದೊಂದಿಗೆ ಅಳಿದುಹೋದವು. ಭೂಹಂಚಿಕೆ ವ್ಯವಸ್ಥೆ ಸುಮಾರಾಗಿ ಮಧ್ಯಯುಗದ ಯುರೋಪಿನ ಫ್ಯೂಡಲ್ ವ್ಯವಸ್ಥೆಯನ್ನೇ ಹೋಲುತ್ತದೆ. ದೇವಸ್ಥಾನ ಮುಂತಾದ ಧಾರ್ಮಿಕ ಸಂಸ್ಥೆಗಳ ಮೇಲುಸ್ತುವಾರಿ ನೋಡಿಕೊಳ್ಳುತ್ತಿದ್ದ ನಂಬೂದಿರಿ ಬ್ರಾಹ್ಮಣರಿಗೆ ರಾಜರು ಭೂಮಿಯನ್ನು ಉಂಬಳಿಯಾಗಿ ಕೊಡುತ್ತಿದ್ದರು.[3] ಹಾಗೆಯೇ, ರಾಜರ ಸೈನಿಕ

ಅಗತ್ಯಗಳನ್ನು ಪೂರೈಸುವ ಗುಂಪುಗಳ ಮುಖಂಡರು (ಮುಖ್ಯವಾಗಿ ನಾಯರ್ ಜನಾಂಗದವರು) ರಾಜರಿಂದ ಭೂಮಿ ಪಡೆಯುತ್ತಿದ್ದರು. ಜೆನ್ಮಿಗಳಿಂದ ಒಂದು ನಿರ್ದಿಷ್ಟ ಅವಧಿಗಾಗಿ ಒಂದಷ್ಟು ಭೂಮಿಯನ್ನು ಗೇಣಿಗೆ ವಹಿಸಿಕೊಳ್ಳುವುದು ಕನಂ ಪದ್ಧತಿ, ಇದಕ್ಕಾಗಿ ಅವರು ಸ್ವಲ್ಪ ಹಣವನ್ನು ಭದ್ರತೆ ಅಥವಾ ಮುಂಗಡ ಗೇಣಿಯಾಗಿ ಜೆನ್ಮಿಗೆ ಕೊಡುತ್ತಿದ್ದರು. ಇದು ಒಂದು ರೀತಿಯಲ್ಲಿ ಭೂಮಿಯನ್ನು ಅಡವಿಡುವ ಕ್ರಮ. ಈ ಕನಂದಾರರು ಒಂದೋ ವೆರಂಪಟ್ಟಂದಾರರಿಗೆ ಭೂಮಿಯನ್ನು ನಿಜವಾದ ಸಾಗುವಳಿಗಾಗಿ ಪರಭಾರೆ ಮಾಡುತ್ತಿದ್ದರು. ಅಥವಾ ಹೊರಗಿನ ಕೂಲಿಗಳನ್ನು ಬಳಸಿಕೊಂಡು ತಾವೇ ಬೇಸಾಯ ಮಾಡುತ್ತಿದ್ದರು. ಅವರಲ್ಲಿ ಬರೇ ಕೆಲವರು ಮಾತ್ರ ತಮ್ಮ ಕುಟುಂಬದ ಕೆಲಸದಾಳುಗಳನ್ನು ಬಳಸಿ ಬೇಸಾಯ ಮಾಡಿಸುತ್ತಿದ್ದರು. ಹೆಚ್ಚಿನ ಕನಂದಾರರು ವಿದ್ಯಾವಂತ ಮಧ್ಯಮ ವರ್ಗದಿಂದ ಬಂದವರಾಗಿದ್ದರು. ಇವರಲ್ಲಿ ಅನೇಕ ಮಂದಿ ಸರಕಾರಿ ಕಚೇರಿಗಳಲ್ಲಿ ಅಧಿಕಾರಿಗಳ ಹುದ್ದೆ ಹೊಂದಿದ್ದರು (ಮುಖ್ಯವಾಗಿ ಬ್ರಿಟೀಷರ ಆಗಮನದ ಅನಂತರ). ಹೀಗೆ ಹಣ ಹೂಡಿ ಕನಂ ಹಕ್ಕನ್ನು ಪಡೆದುಕೊಂಡ ಇವರು ಸಹಜವಾಗಿಯೇ ವ್ಯವಸಾಯಿ ಸಾಮಾಜಿಕ ರಚನೆಯಲ್ಲಿ ಮಧ್ಯವರ್ತಿ ಸ್ಥಾನವನ್ನು ಗಳಿಸಿಕೊಂಡರು. ಭೂಮಿಯನ್ನು ಪುನಃ ಪಡೆಯಬಹುದಾದ ಜೆನ್ಮಿಗಳ ಈ ವಿಶೇಷ ಅಧಿಕಾರ ಮುಖ್ಯವಾಗಿ ಎರಡು ರೀತಿಯಲ್ಲಿ ಬಳಕೆಯಾಗುತ್ತಿದ್ದಂತೆ ಕಂಡುಬರುತ್ತದೆ. ಮೊದಲನೆಯದಾಗಿ, ಜೆನ್ಮಿಯು ಸತ್ತಾಗ ತೆಗೆದುಕೊಂಡ ಹಣವನ್ನು ಮರುಪಾವತಿ ಮಾಡಿದಲ್ಲಿ ಅವನ ಉತ್ತರಾಧಿಕಾರಿಯು ಭೂಮಿಯ ಒಡೆಯನಾಗುತ್ತಿದ್ದನು. ಎರಡನೆಯದಾಗಿ, ಹಳೆಯ ಒಪ್ಪಂದದ ವಾಯಿದೆ ಮುಗಿದು ಅದನ್ನು ಮುಂದುವರೆಸುವ ಸಂದರ್ಭದಲ್ಲಿ ಜೆನ್ನಿಯು ಮುಂದುವರಿಕೆ ಕರವನ್ನು ಕನಂದಾರನಿಂದ ಪಡೆಯಬಹುದಿತ್ತು. ಏನಿದ್ದರೂ, ಭೂವ್ಯವಹಾರಕ್ಕೆ ಸಂಬಂಧಿಸಿದ ಇಂತಹ ಲೇವಾದೇವಿಗಳೆಲ್ಲ ಶಾಸನಬದ್ಧ ಕಾನೂನುಗಳಿಗಿಂತ ಸಾಂಪ್ರದಾಯಿಕ ಕಟ್ಟುಕಟ್ಟಳೆಗಳ ಬಲದಲ್ಲೇ ನಡೆಯುತ್ತಿದ್ದವು.[4] ಹೀಗೆ ಜೆನ್ಮಿಗಳನ್ನು ಭೂಮಿಯ 'ಪರಮಾವಧಿ ಒಡೆಯ' ಎಂದು ಪರಿಗಣಿಸುವ ಬ್ರಿಟೀಷರ ನಿರ್ಧಾರ ಮಲಬಾರಿನಲ್ಲಿ ಅವರು ಅನುಸರಿಸಿದ ಭೂನೀತಿಯ ಶಾಶ್ವತ ನೆಲೆಗಟ್ಟಾಗಿತ್ತು ಎಂಬುದು ಗಮನಾರ್ಹವಾಗಿದೆ. ಹಕ್ಕುಗಳ ಪುನರ್ ಸ್ಥಾಪನೆಯ ಈ ಬ್ರಿಟಿಷ್ ನೀತಿಯನ್ನು 'ಒಳ್ಳೆಯ ಸರಕಾರದ ಉನ್ನತ ಸಾಧನೆ ಹಾಗೂ ಉತ್ತಮ ಭವಿಷ್ಯಕ್ಕೆ ಭರವಸೆ' ಎಂಬುದಾಗಿ ಪ್ರಚಾರ ಮಾಡಲಾಯಿತು. ಇದರಿಂದಾಗಿ ಕಂದಾಯ ಅಧಿಕಾರಿಗಳಲ್ಲಿ ಲಂಚಗುಳಿತನ ವಿಪರೀತವಾಗಿ ಬೆಳೆಯಿತು. ಇವರು ಭೂಮಾಲಿಕರ ಜೊತೆ ಸೇರಿ ಅವರಿಗೆ ಅನುಕೂಲವಾಗುವಂತೆ ದಾಖಲೆಗಳನ್ನು ಹಾಗೂ ಒಪ್ಪಂದ ಪತ್ರಗಳನ್ನು ತಿದ್ದುವ ಕೆಲಸಕ್ಕೂ ಇಳಿದರು. ಹೊಸದಾಗಿ ರಚಿತವಾದ ನ್ಯಾಯಾಲಯಗಳಿಂದಾಗಿ ತೆರಿಗೆ ಹಾಗೂ ಗೇಣಿಯನ್ನು ಹೆಚ್ಚಿಸಿಕೊಳ್ಳಲು ಜೆನ್ಮಿಗಳಿಗೆ ಅನುಕೂಲವಾಯಿತು. ಇದಕ್ಕೊಪ್ಪದವರು ಕಾನೂನು ಕ್ರಮಗಳ ಮೂಲಕವೇ ಆಸ್ತಿಯಿಂದ ಹೊರದಬ್ಬಲ್ಪಡುವ

ಅಪಾಯಕ್ಕೆ ಒಳಗಾಗಬೇಕಿತ್ತು. ಬ್ರಿಟಿಷರ ಈ ಹೊಸ ಭೂನೀತಿ 1880ರವರೆಗೆ ಯಾರಿಂದಲೂ ಪ್ರಶ್ನಿಸಲ್ಪಡದಿದ್ದರೂ, ಮಲಬಾರಿನ ವ್ಯವಸಾಯೀ ಸಾಮಾಜಿಕ ರಚನೆಯನ್ನು ಅದು ಗಂಭೀರವಾಗಿ ಕಲುಕಿತು.

1871ರ ಮೊದಲ ಜನಗಣತಿ ವರದಿಗಳ ಪ್ರಕಾರ ಮದ್ರಾಸ್ ಪ್ರಾಂತದಲ್ಲಿ ಒಟ್ಟು ಗಂಡಸರ ಸಂಖ್ಯೆಯಲ್ಲಿ ಬೇಸಾಯಗಾರ–ಮಾಲೀಕರ ಪ್ರಮಾಣ ಶೇಕಡಾ 31. 3ರಷ್ಟಿದ್ದರೆ, ಮಲಬಾರಿನಲ್ಲಿ ಇದು ಬರೇ 15. 9% ಇತ್ತು. ಅದೇ ಹೊತ್ತಿಗೆ ಕೃಷಿ ಕೂಲಿಗಳ ಪ್ರಮಾಣ ಮಲಬಾರಿನಲ್ಲಿ 27. 4% ಇದ್ದರೆ ಮದ್ರಾಸ್ ಪ್ರಾಂತ್ಯದಲ್ಲಿ ಇದು 13. 1% ಇತ್ತು. ಎಲ್ಲ ದಂಗೆಗಳು ಒಂದೇ ರೀತಿಯಲ್ಲಿ ಸ್ಫೋಟಗೊಳ್ಳುತ್ತಿದ್ದವು. ಹೆಚ್ಚು ಕಡಿಮೆ ಎಲ್ಲ ಕಡೆ ಬ್ರಾಹ್ಮಣ ಜೆನ್ಮಿಯೋ, ನಾಯರ್ ಆಫೀಸರನೊ, ಅಥವಾ ಜೆನ್ಮಿಯ ಕೆಲಸದವನೋ ಮಾಪಿಳ್ಳೆ ಯುವಕರಿಂದ ಹಲ್ಲೆಗೆ ಒಳಗಾಗುತ್ತಿದ್ದ. ಕೆಲವೊಮ್ಮೆ ಇವರ ಸಿಟ್ಟು ದೇವಸ್ಥಾನಗಳನ್ನು ಸುಡುವುದರಲ್ಲೋ ಅಥವಾ ಅಶುದ್ಧಗೊಳಿಸುವುದರಲ್ಲೋ ವ್ಯಕ್ತವಾಗುತ್ತಿತ್ತು. ಒಮ್ಮೊಮ್ಮೆ ಜಮೀಂದಾರರ ಮನೆ ಸುಡಲ್ಪಡುತ್ತಿತ್ತು ಅಥವಾ ಲೂಟಿಯಾಗುತ್ತಿತ್ತು. ಇಂತಹ ಹೋರಾಟಗಾರರು ಕೆಲವು ಸಲ ಮಸೀದಿಗಳಲ್ಲಿ ಅಥವಾ ಆಕ್ರಮಿಸಲ್ಪಟ್ಟ ದೇವಸ್ಥಾನಗಳಲ್ಲಿ ಆಶ್ರಯ ಪಡೆದುಕೊಂಡು ಪೋಲೀಸ್ ಅಥವಾ ಸೈನಿಕ ಕಾರ್ಯಾಚರಣೆಯಿಂದ ರಕ್ಷಣೆ ಪಡೆದುಕೊಳ್ಳುತ್ತಿದ್ದರು. ಆದರೆ, ಅಂತಿಮವಾಗಿ ಇಂತಹ ಕಾರ್ಯಾಚರಣೆಗಳಲ್ಲಿ ಇವರೆಲ್ಲ ಗುಂಡಿಗೆ ಬಲಿಯಾಗುತ್ತಿದ್ದರು.

**ಧರ್ಮ ಮತ್ತು ರಾಜಕೀಯ:**

1849ರಲ್ಲಿ ಮಂಜೇರಿಯಲ್ಲಿ ಇನ್ನೊಂದು ಗಂಭೀರವಾದ ದಂಗೆ ಸಂಘಟಿಸಲ್ಪಟ್ಟಿತು. ಮಾಪಿಳ್ಳೆಗಳ ಒಂದು ಸಣ್ಣ ಗುಂಪು (ಒಬ್ಬ ನಾಯರ್‌ನೂ ಸೇರಿದಂತೆ) 4 ಜನ ಹಿಂದೂಗಳನ್ನು ಕೊಂದಾಗ ಗಲಭೆ ಹುಟ್ಟಿಕೊಂಡಿತು. ದಂಗೆಕೋರರು ತಮ್ಮ ಬಲವನ್ನು ಅಂತಿಮವಾಗಿ ಪ್ರದರ್ಶಿಸುವ ಹೊತ್ತಿಗೆ ಅವರ ಸಂಖ್ಯೆ 70ಕ್ಕೇರಿತು. ಈ ಘಟನೆಯಲ್ಲಿ 64 ಮಾಪಿಳ್ಳೆಗಳು ಗುಂಡಿಗೆ ಬಲಿಯಾದರು. ಈ ಕಾರ್ಯಾಚರಣೆಯಲ್ಲಿ ಗುಂಡಿಗೆ ಆಹುತಿಯಾದ ಈ ದಂಗೆಕೋರರ ಸಾಮಾಜಿಕ ಹಿನ್ನೆಲೆಯ ಬಗೆಗಿನ ಕೆಲವು ಮಾಹಿತಿಗಳು ಕುತೂಹಲಕಾರಿಯಾಗಿವೆ. ಇವರಲ್ಲಿ 45 ಜನ 24 ವರ್ಷಕ್ಕಿಂತ ಕೆಳಗಿನ ಅವಿವಾಹಿತರಾಗಿದ್ದರು. ಇವರೆಲ್ಲ ಒಂದೋ ನಿರುದ್ಯೋಗಿಗಳಾಗಿದ್ದರು ಅಥವಾ ತಾತ್ಕಾಲಿಕ ಕೃಷಿಕೂಲಿಗಳಾಗಿದ್ದರು (ಶ್ರೀಮಂತ ಮಾಪಿಳ್ಳೆ ಕನಂದಾರರು ಇಂತಹ ದಂಗೆಗಳಲ್ಲಿ ಭಾಗವಹಿಸಿದ ಬಗ್ಗೆ ಎಲ್ಲೂ ದಾಖಲೆಗಳಿಲ್ಲ ). ಅಂತಿಮವಾಗಿ, ವ್ಯವಸಾಯೀ ಸಂಕಷ್ಟಗಳೇ ಈ ದಂಗೆಯನ್ನು ಪ್ರೇರೇಪಿಸಿದ್ದವು. ದಂಗೆಗಳಲ್ಲಿ ಭಾಗವಹಿಸಿದ ಹೆಚ್ಚಿನ ಸದಸ್ಯರು ಒಂದಲ್ಲ ಒಂದು ವಿಧದಲ್ಲಿ, ಅದರ ಮುಖ್ಯಸ್ಥ ಅತ್ತನ್ ಕರ್‌ರಿಕ್ಕಲ್ ಜೊತೆಗೆ ಕೌಟುಂಬಿಕ ಸಂಬಂಧ

ಇದ್ದವರಾಗಿದ್ದರು. ಈ ಅತ್ತನ್ ಕರ್‌ರಿಕ್ಕಲ್‌ನ ವಂಶದವರೂ ಹಿಂದೆ ಮಾಪಿಳ್ಳೆ ದಂಗೆಗಳಲ್ಲಿ ಭಾಗಿಗಳಾಗಿದ್ದರು. ಅತ್ತ ಕರ್‌ರಿಕ್ಕಲ್ ಅಂತಿಮವಾಗಿ ತನ್ನ ಪಾರಂಪರಿಕ ಆಸ್ತಿಯನ್ನು ಕಳೆದುಕೊಳ್ಳಬೇಕಾಯಿತು. ಮೇಲಿಂದ ಮೇಲೆ ಮಾಪಿಳ್ಳೆ ಹಿಡುವಳಿದಾರರನ್ನು ತಮ್ಮ ಆಸ್ತಿಯಿಂದ ಹೊರಹಾಕುವ ಹಿಂದೂ ಭೂಮಾಲಿಕರ ಶಾಸನಾತ್ಮಕ ಕ್ರಮ ಅತ್ತನ್ ಕರ್‌ರಿಕ್ಕಲ್‌ನನ್ನು ರೊಚ್ಚಿಗೆಬ್ಬಿಸಿತು. ಇದರಿಂದಾಗಿ ಮಾಪಿಳ್ಳೆ ರೈತರು ತಮ್ಮ ಜೀವನಾಧಾರವನ್ನೇ ಕಳೆದುಕೊಳ್ಳುವಂತಾಯ್ತು. ಇದಲ್ಲದೆ, ಸರಕಾರ ಅತ್ತನ್ನ ಪೂರ್ವಜರ ಪಾಲಿಗೆ ಬಂದಿದ್ದ ಇನಾಂ ಅಥವಾ ವಕ್ಸ್ (ಕಂದಾಯ ರಹಿತ) ಭೂಮಿಯನ್ನು ಆಕ್ರಮಿಸಿಕೊಂಡಿತ್ತು. ಅವರು ಕಟ್ಟಿದ್ದ ಮಸೀದಿಯ ಮೇಲ್ವಿಚಾರಣೆಗಾಗಿ ಈ ಭೂಮಿ ಅವರಿಗೆ ಕೊಡಲಾಗಿತ್ತು. ಆದರೆ ನ್ಯಾಯಬದ್ಧವಾದ ಅವರ ಎಲ್ಲ ಅಹವಾಲುಗಳನ್ನು ಸರಕಾರ ಕಣ್ಮುಚ್ಚಿ ಬದಿಗೆ ತಳ್ಳಿತ್ತು. ವಿಶೇಷವೆಂದರೆ, ಅತ್ತನ್ನ ವಿಕಟ ವ್ಯಕ್ತಿತ್ವ ಮತ್ತು ಆತನಿಗೆ ಮಾಪಿಳ್ಳೆ ಜನಾಂಗದ ಪ್ರಮುಖ ಗುರು ತಿರುರಂಗಡಿಯ ತಂಗಳ್ ಜೊತೆಗಿನ ಅನ್ನೋನ್ಯ ಸ್ನೇಹವೇ 1894ರ ದಂಗೆಗಳಿಗೆ ಕಾರಣ ಎಂದು ಬ್ರಿಟಿಷ್ ಅಧಿಕಾರಿಗಳು ಅಭಿಪ್ರಾಯಪಟ್ಟದ್ದಾರೆ. ಹೀಗಾಗಿ, ಮಂಜೇರಿ ದಂಗೆ ಬರೇ 'ಧರ್ಮಾಂಧತೆಯ' ಒಂದು ನಿದರ್ಶನವಾಗಿ ಚಿತ್ರಿಸಲ್ಪಟ್ಟಿತು.[5] ಇದರ ಜೊತೆಗೆ ಒಂದು ಕುತೂಹಲಕಾರಿಯಾದ ಅಂಶವೆಂದರೆ, ನಾಯರ್ ಮತ್ತು ಬ್ರಾಹ್ಮಣ ಭೂಮಾಲಿಕರಿಗೆ, ಮಾಪಿಳ್ಳೆ ಧರ್ಮಾಂಧತೆಯಿಂದ ಉದ್ಭವಿಸಿದ ಅಭದ್ರತೆಯಿಂದ ರಕ್ಷಣೆ ಸಿಗುವಂತೆಯೂ ಕಮಿಷನರರಿಗೆ ಆದೇಶಿಸಲಾಗಿತ್ತು. ದಕ್ಷಿಣ ಮಲಬಾರಿನಲ್ಲಿ ಮಾಪಿಳ್ಳೆ ದಂಗೆಗಳಾಗಲು ಭೂಮಾಲಿಕರ ದೌರ್ಜನ್ಯ ಕಾರಣವಾಗಿರದೆ, ಉಪಕಾರ ಸ್ಮರಣೆಯ ಭಾವನೆಯೇ ಇರದ ಮಾಪಿಳ್ಳೆ ರೈತರ ಸಹಜ ಸ್ವಭಾವವೇ ಕಾರಣವೆಂದೂ, ಈ ರೈತರು ಕಾನೂನುಬಾಹಿರವಾದ ಸುಳ್ಳು ಬೇಡಿಕೆಗಳನ್ನು ಮುಂದಿಡುತ್ತಿದ್ದರೆಂದೂ ಕಮಿಷನರ್ ಸಮರ್ಥಿಸಿದರು. ಕಮಿಷನರ್ ಪ್ರಕಾರ, 'ಈ ಭೂಮಾಲಿಕರಿಗೆ ಹಣ ಮಾಡಲು ಬೇರೆ ಯಾವ ಮಾರ್ಗವೂ ಇದ್ದಿರಲಿಲ್ಲ. ಬ್ರಿಟೀಷರು ಜಾರಿಗೊಳಿಸಿದ ಭೂನೀತಿ ಹಾಗೂ ಒಕ್ಕಲೆಬ್ಬಿಸುವಿಕೆ ಸ್ವಲ್ಪ ಮಟ್ಟಿಗೆ ದುರ್ಬಳಕೆಯಾಗಿದೆ ಎಂಬುದನ್ನು ಕಮಿಷನರ್ ಒಪ್ಪಿದರೂ, ಧಾರ್ಮಿಕ ಮುಖಂಡರ ಮತ್ತು ಮಸೀದಿಗಳ ಒಂದು ವ್ಯಾಪಕ ಜಾಲವೇ ಅಸಹನೆಯನ್ನು ಪ್ರೋತ್ಸಾಹಿಸಿ ಮಾಪಿಳ್ಳೆ ದಂಗೆಗೆ ಕಾರಣವಾಯಿತು' ಎಂಬ ದೃಢ ತೀರ್ಮಾನಕ್ಕೆ ಅವರು ಬಂದರು.

ಮಾಪಿಳ್ಳೆ ಜನಾಂಗ ತಂಗಳ್ (ಜನಾಂಗದ ಗುರುಗಳು) ಮತ್ತು ಮಸೀದಿಗಳಿಗೆ ಒಂದು ಹೊಸ ಜವಾಬ್ದಾರಿಯನ್ನು ಕಂಡುಹಿಡಿಯಿತು. ಕುತೂಹಲಕಾರಿಯಾದ ಅಂಶವೆಂದರೆ, 1830ರ ಮೊದಲು ತಂಗಳ್‌ಗಳ ಬಗ್ಗೆ ಸಾರ್ವಜನಿಕವಾಗಿ ಅಷ್ಟೇನೂ ತಿಳಿದಿರಲಿಲ್ಲ. ಆದರೆ ಅನಂತರ ಅವರು ಏಕಾಏಕಿ ವಿಶೇಷ ಮಹತ್ವ ಪಡೆದರು. ಆಗಲೇ ಮಲಬಾರಿನಲ್ಲಿ ಮಸೀದಿ ಮತ್ತು ಮದ್ರಸಗಳ ಒಂದು ಬಲವಾದ ವ್ಯವಸ್ಥೆ

ಅಸ್ತಿತ್ವದಲ್ಲಿತ್ತು. 1831ರಲ್ಲಿ ಮಲಬಾರಿನಲ್ಲಿ 637 ಮಸೀದಿಗಳಿದ್ದವು. 1851ರಷ್ಟರಲ್ಲಿ ಇವುಗಳ ಸಂಖ್ಯೆ 1058ಕ್ಕೆ ಏರಿತ್ತು. ಪೊನ್ನಾನಿಯ ಮದ್ರಸಾವೊಂದರಲ್ಲಿ ಅದರ ಮುಖ್ಯಸ್ಥ ಶ್ರದ್ದೆ ಹಾಗೂ ಸಾಮರ್ಥ್ಯವಿರುವ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಅವರಿಗೆ ಮುಸಲಿಯಾರ್, ಕಾಜಿ ಮುಂತಾದ ಪದವಿಗಳನ್ನು ಕೊಟ್ಟು ಹರಸುತ್ತಿದ್ದ. ಧಾರ್ಮಿಕ ಶ್ರೇಣಿಯಲ್ಲಿ ಅತ್ಯುನ್ನತ ಸ್ಥಾನ ತಂಗಳ್‌ಗಳದ್ದಾಗಿತ್ತು.[6] ತಂಗಳ್ ಮತ್ತು ಇತರ ಧಾರ್ಮಿಕ ಮುಖಂಡರು ಮಾಪಿಳ್ಳೆ ಜನಾಂಗದ ಒಗ್ಗಟ್ಟನ್ನು ಹೇಗೆ ಕಾಯ್ದುಕೊಂಡರು? ಯಾವ ಭಾಷೆ ಅಥವಾ ನುಡಿಗಟ್ಟುಗಳ ಬಳಕೆಯಿಂದ ತಮ್ಮ ಜನಾಂಗದಲ್ಲಿ ಒಗ್ಗಟ್ಟನ್ನು ಜಾಗೃತಗೊಳಿಸಲು ಅವರಿಗೆ ಸಾಧ್ಯವಾಯಿತು? 1830–1880ರ ಅವಧಿಯಲ್ಲಿ ಅವರು ತಮ್ಮ ಅಶಿಕ್ಷಿತ ಜನಾಂಗವನ್ನು ಭೂಮಾಲಿಕ ವರ್ಗದ ವಿರುದ್ದ ಪ್ರಚೋದನಾತ್ಮಕವಾಗಿ ಬಡಿದೆಬ್ಬಿಸಿದರೆ? ಇವೆಲ್ಲ ತುಂಬ ಮಹತ್ವದ ಪ್ರಶ್ನೆಗಳಾದರೂ, ಸರಿಯಾದ ಮಾಹಿತಿಗಳು ಲಭ್ಯವಿಲ್ಲದ ಕಾರಣ ಇವುಗಳಿಗೆ ಸಮರ್ಪಕವಾದ ಉತ್ತರ ಪಡೆಯುವುದು ಕಷ್ಟ. ಇಷ್ಟಾದರೂ ಕೆಲವು ತಂಗಳಿಗಳಂತೂ ತಮ್ಮ ಹಿಂಬಾಲಕರನ್ನು ಹಿಂಸೆಗೆ ಪ್ರಚೋದಿಸಿದ್ದು ಸತ್ಯ. ಮತಾಂತರ ಚೆರುಮಾರ್‌ಗಳಿಗೆ ಜೆನ್ಮಿ ಭೂಮಾಲೀಕರ ದಬ್ಬಾಳಿಕೆಯಿಂದ ಬಿಡುಗಡೆ ಪಡೆಯಲು ಒಂದು ಅವಕಾಶ ಒದಗಿಸಿತ್ತು. ಏನಿಲ್ಲವೆಂದರೂ ಇದರಿಂದಾಗಿ ಅವರಿಗೆ ಒಂದು ಬಗೆಯ 'ಸಾಮಾಜಿಕ ಸ್ಥಾನಮಾನ' ದೊರಕಿದಂತಾಯಿತು. ಪ್ರತಿಯೊಬ್ಬ ಮತಾಂತರಗೊಂಡ ಸದಸ್ಯನೂ ಮಾಪಿಳ್ಳೆಗಳಿಗೆ ತಮ್ಮ ಸಾಮೂಹಿಕ ಶಕ್ತಿಯನ್ನು ಬಲಪಡಿಸುವುದರ ಜೊತೆಗೆ, ಜೆನ್ಮಿಗಳ ಭೂಮಿಯಲ್ಲಿ ದುಡಿಯುವ ಸದಸ್ಯನೊಬ್ಬ ಕಡಿಮೆಯಾದಂತಾಗಿ, ಅಷ್ಟರಮಟ್ಟಿಗೆ ಅವರ ಕೃಷಿ ಕಾರ್ಯಕ್ಕೆ ತೊಂದರೆಯುಂಟಾಗುವ ಸಮಾಧಾನವನ್ನು ಕೊಡುತ್ತಿತ್ತು. ಉದಾಹರಣೆಗೆ, 1852ರ ಮೊದಲಲ್ಲಿ ತಿರುರಂಗಡಿಯ ತಂಗಳ್ ತನ್ನ ಹಿಂಬಾಲಕರಿಗೆ ಕೊಟ್ಟ ಸೂಚನೆಗಳಲ್ಲಿ ಟ್ರೇಡ್ ಯೂನಿಯನ್ ಮನೋಭಾವದ ಪ್ರಾಥಮಿಕ ಸುಳಿವುಗಳನ್ನು ಗುರುತಿಸಬಹುದು. ನಾಯರ್‌ಗಳನ್ನು ಕುರಿತು ಗೌರವಪೂರ್ವಕವಾಗಿ “ನೀವು' ಎಂದು ಸಂಬೋಧಿಸಬಾರದೆಂದೂ, ಬರೇ ಏಕವಚನದ 'ನೀನು' ಎಂತಲೇ ಉದ್ದೇಶಿಸಬೇಕೆಂದೂ ಅವನು ಮಾಪಿಳ್ಳೆಗಳಿಗೆ ಸೂಚಿಸಿದ. ಇದು ನಾಯರ್‌ಗಳು ಮಾಪಿಳ್ಳೆಗಳನ್ನು ಸಂಬೋಧಿಸುವ ರೀತಿಯಲ್ಲೇ ಇರಬೇಕೆಂದೂ ಸಲಹೆ ಕೊಡಲಾಯಿತು. ಅಲ್ಲದೆ, ಶ್ರೀಮಂತ ನಂಬೂದಿರಿ ಬ್ರಾಹ್ಮಣರಲ್ಲಿ ಮತ್ತು ನಾಯರ್‌ಗಳಲ್ಲಿ ಹೆಚ್ಚಾಗಿ ಉಳಿದ ಆಹಾರವನ್ನು ತಿನ್ನಬಾರದೆಂದೂ ಅವರಿಗೆ ಸೂಚಿಸಲಾಯಿತು. (ಈ ಪದ್ಧತಿ ಮಲಬಾರಿನ ಕೆಳಜಾತಿಯ ಜನರಲ್ಲಿ ಚಾಲ್ತಿಯಲ್ಲಿತ್ತು). ಇದಲ್ಲದೇ, ಶುಕ್ರವಾರಗಳಲ್ಲಿ ಹೊಲ ಉಳುವ ಕೆಲಸ ಮಾಡದೇ, ಅದನ್ನು ವಿಶ್ರಾಂತಿ ದಿನವಾಗಿ ಧಾರ್ಮಿಕ ಆಚರಣೆಗೆ ಬಳಸಬೇಕೆಂದೂ ತಿಳಿಹೇಳಲಾಯಿತು. ಈ ಸೂಚನೆಗಳನ್ನು ಆಗಾಗ ಕೊಡಲಾಗುತ್ತಿತ್ತೇ? ಮಸೀದಿಯಲ್ಲಿ ಪ್ರಾರ್ಥನೆಗಾಗಿ ನೆರೆದ ಗುಂಪುಗಳಿಗೆ ಮೌಖಿಕವಾಗಿ ಇಂತಹ ನಿಯಮಗಳನ್ನು ತಿಳಿಸಲಾಗುತ್ತಿತ್ತೇ? ಅಥವಾ ಫತ್ವಾಗಳನ್ನು

(ಬರಹದಲ್ಲಿ ಹೊರಡಿಸುವ ಕಾನೂನುಗಳು) ಹೊರಡಿಸಲಾಗುತ್ತಿತ್ತೇ? ಇಂತಹ ಪ್ರಶ್ನೆಗಳಿಗೆ ಖಚಿತವಾದ ಉತ್ತರ ಹೇಳುವುದು ಕಷ್ಟ ಹೊಸದಾಗಿ ಉದ್ಭವಿಸಿದ ಸನ್ನಿವೇಶದ ಹಿನ್ನೆಲೆಯಲ್ಲಿ ಇಡೀ ಮುಸ್ಲಿಂ ಮತಪಂಡಿತರ ವಿವಿಧ ಶ್ರೇಣಿಯ ಮುಖಂಡರು ಧಾರ್ಮಿಕೇತರ ಕೆಲಸಗಳಲ್ಲಿ ಹೆಚ್ಚೆಚ್ಚು ತೊಡಗಿದರು.

ಮದ್ರಾಸ್ ಸರಕಾರ ಮಲಬಾರಿನ ಜಿಲ್ಲಾ ಮ್ಯಾಜಿಸ್ಟ್ರೇಟ್ ವಿಲಿಯಂ ಲೋಗನ್ ಅವರನ್ನು ನೇಮಿಸಿ, ಭೂವ್ಯವಸ್ಥೆ ಮತ್ತು ಗೇಣಿ ಒಕ್ಕಲಿನ ಭದ್ರತೆಯ ಇಡೀ ಪ್ರಶ್ನೆಯನ್ನು ವಿವರವಾಗಿ ಪರಿಶೀಲಿಸುವಂತೆ ಅವರನ್ನು ಕೇಳಿಕೊಂಡಿತು. ಲೋಗನ್ (ಗ್ರಂಥ– ಲೋಗನ್ ಮ್ಯಾನ್ಯುವಲ್) ಮಲಬಾರ್ ಪ್ರಾಂತ್ಯದ ಭೂವ್ಯವಸ್ಥೆ ಕುರಿತ ಒಂದು ಗ್ರಂಥವನ್ನೇ ರಚಿಸಿದ.[7] ಅವನ ವಿಚಾರಣೆಗೆ ಸಾಕಷ್ಟು ವ್ಯಾಪಕವಾದ ಪ್ರತಿಕ್ರಿಯೆಯೇ ದೊರೆತಿತ್ತು. ಅವನಿಗೆ 4, 021 ವ್ಯಕ್ತಿಗಳಿಂದ 2. 200 ಮನವಿಗಳು ಸಲ್ಲಿಸಲ್ಪಟ್ಟಿದ್ದು, ಅವರಲ್ಲಿ 2, 734 ಮಂದಿ (ಸುಮಾರು 67ಕ್ಕಿಂತ ಹೆಚ್ಚು ಮಾಪಿಳ್ಳೆ ಬೇಸಾಯಗಾರರಾಗಿದ್ದರು. ಉಳಿದವರು ನಾಯರ್, ತಿಯಾ ಮತ್ತು ಕ್ರಿಶ್ಚಿಯನ್ ಗುಂಪಿಗೆ ಸೇರಿದವರಾಗಿದ್ದರು. ಈ ಮನವಿಗಳನ್ನು ತಾಲೂಕು ಹಾಗೂ ಜಾತಿವಾರಾಗಿ ವಿಂಗಡಿಸಿದರೆ ದಕ್ಷಿಣ ಮಲಬಾರಿನಲ್ಲಿ ಅತಿ ಹೆಚ್ಚು ವ್ಯವಸಾಯೀ ಅತೃಪ್ತಿ ವ್ಯಕ್ತವಾದುದು ಸ್ಪಷ್ಟವಾಗುತ್ತದೆ. 2, 200 ಮನವಿಗಳಲ್ಲಿ 1, 876 (85. 2%) ಮನವಿಗಳು ದಕ್ಷಿಣದ ನಾಲ್ಕು ತಾಲೂಕುಗಳಿಂದ ಬಂದಿದ್ದವು. (ಎರ್ನಾಡ್, ವಳ್ಳುವನಾಡ್, ಪಾಲ್ಘಾಟ್ ಮತ್ತು ಪೊನ್ನಾನಿ). ಅಲ್ಲದೆ, ಒಟ್ಟು 4, 021 ಮನವಿದಾರರಲ್ಲಿ, 3, 581 ಜನ (89%) ದಕ್ಷಿಣದ ಈ ನಾಲ್ಕು ತಾಲೂಕುಗಳಿಗೆ ಸೇರಿದವರಾಗಿದ್ದರು. ಇವರಲ್ಲಿ 2, 608 ಮಂದಿ (72%) ಮಾಪಿಳ್ಳೆಗಳು. 1885ರವರೆಗೂ ಸೈನಿಕ ಹಾಗೂ ಪೊಲೀಸ್ ತುಕಡಿಗಳು ಮಾಪಿಳ್ಳೆಗಳನ್ನು ನಿಶ್ಶಸ್ತ್ರೀಕರಿಸುವತ್ತ ತುಂಬ ಜೋರಾಗಿ ಕಾರ್ಯಾಚರಣೆ ನಡೆಸಿ, 17, 295 ಆಯುಧಗಳನ್ನು ವಶಪಡಿಸಿಕೊಂಡವು. 1852–54ರಲ್ಲಿ ಅವರು ವಶಪಡಿಸಿಕೊಂಡುದಕ್ಕಿಂತ ಈ ಸಂಖ್ಯೆ ನಿಶ್ಚಯವಾಗಿಯೂ ಹೆಚ್ಚು ಉತ್ತೇಜನಕಾರಿಯಾಗಿತ್ತು. ಇವುಗಳಲ್ಲೂ 7, 503 ಬಂದೂಕುಗಳಾಗಿರುವುದನ್ನು ಗಮನಿಸಿದರೆ, ಭೂಮಾಲಿಕರ ಹೆಚ್ಚುತ್ತಿರುವ ದೌರ್ಜನ್ಯಗಳನ್ನು ಎದುರಿಸಲು ಮಾಪಿಳ್ಳೆಗಳು ಯಾವ ಪ್ರಮಾಣದಲ್ಲಿ ಸಿದ್ಧರಾಗುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ.

ಭೂಮಿಯ ಮಾಲೀಕರಾದ ಇವರು ಸಹಜವಾಗಿಯೇ ವೆರುಂಪಟ್ಟಂದಾರರಿಗಿಂತ ಹೆಚ್ಚು ಅನುಕೂಲಸ್ಥರೂ, ಪ್ರತಿಷ್ಠಿತರೂ ಆಗಿದ್ದರು. ವೆರುಂಪಟ್ಟಂದಾರರಾದರೋ ಒಮ್ಮೆ ಬೇಸಾಯಗಾರರಾಗುವ ಇನ್ನೊಮ್ಮೆ ಕೃಷಿ ಕೂಲಿಗಳಾಗುವ ಅಸ್ಥಿರ ಹಿನ್ನೆಲೆಯವರು. ವ್ಯವಸಾಯೀ ರಚನೆಯಲ್ಲಿ ಮಧ್ಯವರ್ತಿ ವರ್ಗಗಳ ಕನಂದಾರರಲ್ಲಿ ಬರೇ ಕೆಲವರು ಮಾತ್ರ ತಮ್ಮ ಕುಟುಂಬದ ಸದಸ್ಯರ ಶ್ರಮದಿಂದ ಬೇಸಾಯ ಮಾಡುವವರಾಗಿದ್ದರು. ಇನ್ನುಳಿದ ಹೆಚ್ಚಿನವರು ಒಂದೋ

ವೆರುಂಪಟ್ಟಂದಾರರಿಗೆ ಭೂಮಿಯನ್ನು ಗೇಣಿಗೆ ವಹಿಸಿಕೊಡುತ್ತಿದ್ದರು ಅಥವಾ ಸ್ವಂತ ಮೇಲ್ವಿಚಾರಣೆಯಲ್ಲಿ ಕೂಲಿಗಳಿಂದ ಬೇಸಾಯ ಮಾಡಿಸುತ್ತಿದ್ದರು. ಸಹಜವಾಗಿಯೇ, ಶ್ರೀಮಂತ ಕನಂದಾರರ ವರ್ಗ ಹಿತಾಸಕ್ತಿ ಅವರ ಕೆಳಗಿನ ವರ್ಗಗಳಿಗಿಂತ ತೀರಾ ಭಿನ್ನವಾಗಿತ್ತು. 1921 ಡಿಸೆಂಬರ್ ಕೊನೆಯೊಳಗೆ ಮಾಪಿಳ್ಳೆ ದಂಗೆಯು ಸಂಪೂರ್ಣವಾಗಿ ಹತ್ತಿಕ್ಕಲ್ಪಟ್ಟಿತು. ಅಧಿಕೃತ ದಾಖಲೆಗಳ ಪ್ರಕಾರ 2, 337 ದಂಗೆಕೋರರು ಕೊಲ್ಲಲ್ಪಟ್ಟು 1, 652 ಮಂದಿ ಗಾಯಗೊಂಡು, 45, 404 ಮಂದಿ ಶರಣಾದರು.[8] ನಿಜವಾದ ಅಂಕೆ ಸಂಖ್ಯೆಗಳು ಸರಕಾರ ಹೇಳಿದ ಮೇಲಿನವುಗಳಿಗಿಂತ ಎಷ್ಟೋ ಹೆಚ್ಚಾಗಿರುವ ಸಾಧ್ಯತೆ ಇದೆ. ಏನಿದ್ದರೂ ಸರಕಾರಿ ಅಂಕಿಅಂಶಗಳ ಪ್ರಕಾರವೇ ದಂಗೆಯ ವ್ಯಾಪ್ತಿ ಹಾಗೂ ಇದರಲ್ಲಿ ಪಾಲ್ಗೊಂಡ ಮಾಪಿಳ್ಳೆಗಳ ಸಂಖ್ಯೆ ಸಾಕಷ್ಟೂ ವಿಶಾಲವಾಗಿತ್ತೆಂದು ತಿಳಿಯಬಹುದು. ಖಂಡಿತವಾಗಿಯೂ ಇದು ಕೇವಲ ಕೆಲವೇ ಮತಾಂಧರ ಕೆಲಸವಲ್ಲ. ದಂಗೆಯಲ್ಲಿ ಪಾಲ್ಗೊಂಡಿದ್ದ ಹೆಚ್ಚಿನವರು ಬಡರೈತರು, ಗೇಣಿ ಒಕ್ಕಲುಗಳು ಮತ್ತು ಭೂಹೀನ ಕೃಷಿ ಕಾರ್ಮಿಕರು, ಅದರಲ್ಲೂ ದಂಗೆಯು ತೀವ್ರವಾಗಿದ್ದ ಎರ್ನಾಡು ಮತ್ತು ವಳ್ಳುವನಾಡು ತಾಲೂಕುಗಳಲ್ಲಿ ಇವರೇ ಅಧಿಕ ಸಂಖ್ಯೆಯಲ್ಲಿದ್ದರು. ಆಸ್ತಿ ಹಕ್ಕಿನ ಅಸ್ಥಿರತೆ, ಒಕ್ಕಲೆಬ್ಬಿಸುವಿಕೆ, ಯದ್ವಾತದ್ವಾ ಏರಿದ ಗೇಣಿದರ ಇವುಗಳಲ್ಲದೆ ಜಾಗತಿಕ ಯದ್ಧಾನಂತರ ಏರಿದ ಬೆಲೆಗಳು ಕೂಡ ಅವರಿಗೆ ಸಾಕಷ್ಟು ಬಲವಾದ ಹೊಡೆತನ್ನೇ ಕೊಟ್ಟಿದ್ದವು. ಹಲವಾರು ಹಿಂದುಗಳು ಬಲಾತ್ಕಾರದಿಂದ ಮತಾಂತರಗೊಳಿಸಲ್ಪಟ್ಟರು ಅಥವಾ ಕೊಲೆಯಾದರು ಎನ್ನುವುದನ್ನು ಕೂಡ ಅಲ್ಲಗಳೆಯಲು ಸಾಧ್ಯವಿಲ್ಲ. ಖಿಲಾಫತ್ ಕರೆಯು ಮಾಪಿಳ್ಳೆಗಳ ಮತೀಯ ಭಾವನೆಗಳನ್ನು ಕೆರಳಿಸಿದೆಯೆಂದಾದರೆ ಹೀಗಾಗುವುದು ಸಹಜವೆ, ಈ ಮೊದಲೇ ವಾದಿಸಿದಂತೆ ಮಾಪಿಳ್ಳೆಗಳ ಮತಾಂಧತೆಯು ರೋಗ ಲಕ್ಷಣವೇ ಹೊರತು ರೋಗವಲ್ಲ. 19ನೇ ಶತಮಾನದಾದ್ಯಂತ ಅಲ್ಲಲ್ಲಿ ನಡೆದ ಸಣ್ಣ ಪುಟ್ಟ ದಂಗೆಗಳನ್ನು ಸೇರಿಸಿದಂತೆ 1921ರ ಮಾಪಿಳ್ಳೆ ದಂಗೆಯು ಬಹುಕಾಲದಿಂದ ರೈತರಲ್ಲಿದ್ದ ಅಸಮಾಧಾನದ ಹೊರರೂಪವೇ ಆಗಿದೆ. 1885–1921ರ ನಡುವೆ ರಾಜಕೀಯವಾಗಿ ಮಾಪಿಳ್ಳೆಗಳು ಹೆಚ್ಚು ಪರಕೀಯರಾಗುತ್ತ ಹೋದಂತೆ ಅವರ ಅಸಮಾಧಾನವು ಮತೀಯ ರೂಪವನ್ನು ಅಂದರೆ ಧರ್ಮಾಂಧತೆಯ ರೂಪವನ್ನು ಪಡೆಯುತ್ತಾ ಹೋಯಿತು.[9]

**ಉಪಸಂಹಾರ:**

1921ರ ಮಲಬಾರದ ಮೋಪ್ಲಾ ದಂಗೆ ಪೂರ್ಣವಾಗಿ ಅಲ್ಲದಿದ್ದರೂ ಆಂಶಿಕವಾಗಿಯಾದರೂ ಧಾರ್ಮಿಕ ಮತ್ತು ಪ್ರವಾದಿಯ ನೆಲೆಯ ಚಳುವಳಿ, ಅಖಿಲ ವಿಶ್ವ ಮುಸ್ಲಿಂ ಭಾತೃತ್ವ ಚಳುವಳಿಯ ಹಿನ್ನೆಲೆಯಲ್ಲಿನ ಖಿಲಾಫತ್ ಚಳುವಳಿ ಒಂದು ಧರ್ಮ–ರಾಜಕೀಯ ಪ್ರತಿರೋಧವಾಗಿದ್ದರೂ ಕೂಡಾ, ಮಲಬಾರ್‌ನಲ್ಲಿನ ಅದರ

ಸ್ಥಳೀಯ ಅಭಿವ್ಯಕ್ತಿಯು, 'ಸಹಸ್ರಮಾನದ ಶೋಧ'ವಾಯ್ತು. ಮುಸ್ಲಿಂ ಧರ್ಮ ಗುರುಗಳಾದ, 'ತಂಜಳ್'ಗಳ ಪ್ರವಾದಿಯ ಕನಸುಗಳು ಮತ್ತು ಅವರ ಉಪದೇಶದ ಪ್ರಭಾವ ಬಡ ಮೋಪ್ಲಾ ರೈತರ ಯೋಚನೆ ಮತ್ತು ಕ್ರಿಯೆಗಳಲ್ಲಿ ಉಂಟಾಯಿತು. ಸತತವಾಗಿ ತೀವ್ರ ಆರ್ಥಿಕ ಕುಸಿತ, ಆಘಾತದ ಸ್ಥಿತಿಗಳಿಂದ ಕಂಗೆಟ್ಟಿದ್ದ ಮೋಪ್ಲಾಗಳು, 'ಸಹಸ್ರಮಾನದ ಕರೆ'ಗೆ ಓಗೊಟ್ಟಿದ್ದು ಮಲಬಾರ್‌ನ ಬರಿಯ ಸಣ್ಣ ಪುಟ್ಟ ದಂಗೆಗಳ, ಪ್ರತಿರೋಧಗಳ ಮೂಲಕವಷ್ಟೇ ಅಲ್ಲ, ಬದಲಿಗೆ 1921ರ ಪ್ರಸಿದ್ಧ ದಂಗೆಯ ಮೂಲಕವೂ ಕೂಡಾ ಇದೊಂದು ಸಂಪೂರ್ಣವಾಗಿ ಬೇರೆ ರೀತಿಯ ಸಾಮಾಜಿಕ ವ್ಯವಸ್ಥೆಗೆ ಖಿಲಾಫತ್ ಎನ್ನುವ ಶಬ್ದ ಆಗ ಅನ್ವಯವಾದ ನೆಲೆಯಲ್ಲಿ ಭಾವನಾತ್ಮಕ, ಆವೇಶಯುಕ್ತ ಮತ್ತು ಕ್ರಾಂತಿಕಾರೀ ನೆಗೆತ. ಮಲಬಾರ್‌ನಲ್ಲಿ ದೀರ್ಘಕಾಲೀನ ರೈತ ಸಂಘರ್ಷಗಳು ನಡೀತಿದ್ದರೂ ಕೂಡಾ, ದಮನಿತ ಮೋಪ್ಲಾ ರೈತರು ಪ್ರವಾದಿಯ ಮನವಿಯ ಹೊರತು ಬಂಡೇಳುವುದು ಅಸಾಧ್ಯವಾಗಿತ್ತು. ಈ ರೀತಿಯ ಕೆಲವು ಗುರುತುಗಳು 1920–21ರ ಸುಮಾರಿಗೆ ಉತ್ತರ ಪ್ರದೇಶದ ಅವಧ ಜಿಲ್ಲೆಗಳಲ್ಲಿ ಬಾಬಾ ರಾಮಚಂದ್ರರ ನೇತೃತ್ವದಲ್ಲಿ ಬಡರೈತರು ಹೋರಾಡಿದ ರೈತ ಸಂಘರ್ಷಗಳಲ್ಲಿ ಕಾಣುತ್ತದೆ. ಪ್ರವಾದೀಯ ಮಾದರಿಯ ಭಾರತೀಯ ರೈತದಂಗೆಗಳು, ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಹಾಗೆನೇ ಉಳಿಯಲಿಲ್ಲ. ಬಹಳ ಬೇಗನೇ ಉಳಿದ ವಿಧಗಳೊಂದಿಗೆ ಬೆರೆತು ಹೋದವು ಎನ್ನುವುದು ಸಾಕಷ್ಟು ಸ್ಪಷ್ಟವಾಗಿಯೇ ಕಾಣುತ್ತದೆ. ಉದಾಹರಣೆಗೆ ಮೋಪ್ಲಾ ಬಂಡಾಯ ಮತ್ತು ಯು. ಪಿ. ಯ ಕೆಲವು ಉತ್ಪಾತಗಳು, ಪ್ರತಿರೋಧಗಳು ಕೂಡಲೇ "ಸಾಮಾಜಿಕ ಡಕಾಯಿತಿ" ಗಳ ವಿಧಕ್ಕೆ ಬದಲಾದವು. ಮೋಪ್ಲಾ ಬಂಡಾಯದ ಕೊನೆಯ ಕಾಲಘಟ್ಟದಲ್ಲಿ, ಇತ್ತ ಶುದ್ದ ಪ್ರವಾದಿಯ ಚಳುವಳಿಯಾಗಿಯೂ ಅತ್ತ ಸಾಮಾಜಿಕ ಡಕಾಯಿತಿಯಾಗಿಯೂ ಉಳಿಯದೆ, ಭಯೋತ್ಪಾದಕತೆಯ ಸ್ವರೂಪವನ್ನು ರೈತ ಸಂಘರ್ಷಗಳಲ್ಲಿ ಕಾಣುತ್ತವೆ.

## ಕೊನೆ ಟಿಪ್ಪಣಿಗಳು:

1. ಧನಗೆರೆ ಡಿ.ಎನ್., ರಾಮಚಂದ್ರ ಉಡುಪ & ಅನಂತಕೃಷ್ಣ ಹೆಬ್ಬಾರ (ಅನು), (2012), ಭಾರತದಲ್ಲಿ ರೈತ ಚಳುವಳಿಗಳು 1920-1950, ಕ್ರಿಯಾ ಪ್ರಕಾಶನ, ಬೆಂಗಳೂರು, ಪು.ಸಂ. 81
2. ಶಿವಪ್ಪ ಬಿ.ಸಿ., (2010), ಐತಿಹಾಸಿಕ ಇಣುಕು ನೋಟ, ಕೆ.ಕೆ. ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಬೆಂಗಳೂರು, ಪು.ಸಂ. 188-204.
3. ಧನಗೆರೆ ಡಿ.ಎನ್., ರಾಮಚಂದ್ರ ಉಡುಪ & ಅನಂತಕೃಷ್ಣ ಹೆಬ್ಬಾರ (ಅನು), (2012), ಭಾರತದಲ್ಲಿ ರೈತ ಚಳುವಳಿಗಳು 1920-1950, ಕ್ರಿಯಾ ಪ್ರಕಾಶನ, ಬೆಂಗಳೂರು, ಪು.ಸಂ. 85
4. R.H. Hitchcock, "Peasant Revolt in Malabar: A History of the Malabar Rebellion-1921", 1 January 2019, Page No. 87
5. ಶೈಲಜಾ ಜಿ.ಪಿ., (2022), ಮೈಸೂರು, ಕೆನರಾ ಮತ್ತು ಮಲಬಾರ್ ಪ್ರಾಂತ್ಯಗಳ ಮೂಲಕ 'ಮದ್ರಾಸಿನಿಂದ ಒಂದು ಪಯಣ': ಸಂಪುಟ-1, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು90
6. Bipan Chandra, Mridula Mukherjee, Aditya Mukherjee, "India's Struggle for Independence", Penguin UK, 2016, Page No. 92
7. Hussain Randathani, "Mappila Muslims: A Study on their Political and Social Life", Other Books, 2007, Page No. 96
8. ಗಣೇಶ್ ಕೆ.ಎನ್., (2021), ಮಲಬಾರ್ ಬಂಡಾಯ-1921: ವಸಾಹತುಶಾಹಿ ಮತ್ತು ಭೂಮಾಲಿಕರ ವಿರುದ್ಧದ ಹೋರಾಟ, ಜನಶಕ್ತಿ, ಬೆಂಗಳೂರು.
9. ಧನಗೆರೆ ಡಿ.ಎನ್., ರಾಮಚಂದ್ರ ಉಡುಪ & ಅನಂತಕೃಷ್ಣ ಹೆಬ್ಬಾರ (ಅನು), (2012), ಭಾರತದಲ್ಲಿ ರೈತ ಚಳುವಳಿಗಳು 1920-1950, ಕ್ರಿಯಾ ಪ್ರಕಾಶನ, ಬೆಂಗಳೂರು, ಪು.ಸಂ. 97

## ಪರಾಮರ್ಶನ ಗ್ರಂಥಗಳು:


1. ಧನಗೆರೆ ಡಿ.ಎನ್., ರಾಮಚಂದ್ರ ಉಡುಪ & ಅನಂತಕೃಷ್ಣ ಹೆಬ್ಬಾರ (ಅನು), (2012), ಭಾರತದಲ್ಲಿ ರೈತ ಚಳುವಳಿಗಳು 1920-1950, ಕ್ರಿಯಾ ಪ್ರಕಾಶನ, ಬೆಂಗಳೂರು.
2. ಶಿವಪ್ಪ ಬಿ.ಸಿ., (2010), ಐತಿಹಾಸಿಕ ಇಣುಕು ನೋಟ, ಕೆ.ಕೆ. ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಬೆಂಗಳೂರು.
3. ಗಣೇಶ್ ಕೆ.ಎನ್., (2021), ಮಲಬಾರ್ ಬಂಡಾಯ-1921: ವಸಾಹತುಶಾಹಿ ಮತ್ತು ಭೂಮಾಲಿಕರ ವಿರುದ್ಧದ ಹೋರಾಟ, ಜನಶಕ್ತಿ, ಬೆಂಗಳೂರು.
4. ಶೈಲಜಾ ಜಿ.ಪಿ., (2022), ಮೈಸೂರು, ಕೆನರಾ ಮತ್ತು ಮಲಬಾರ್ ಪ್ರಾಂತ್ಯಗಳ ಮೂಲಕ 'ಮದ್ರಾಸಿನಿಂದ ಒಂದು ಪಯಣ': ಸಂಪುಟ-1, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.
5. https://www.drishtiias.com/daily-news-analysis/malabar-rebellion

6. Variankunnath, "Malabar rebellion leaders' exclusion from ICHR book triggers controversy", new Indian express, 24 Aug 2021.
7. Amrith Lal, "The Malabar rebellion is a layered story with multiple strands that defy simplistic narrations", new Indian express, Jul 5, 2020.
8. R.H. Hitchcock, "Peasant Revolt in Malabar: A History of the Malabar Rebellion–1921", 1 January 2019.
9. Biju Achuthan, "Malabar Rebellion: A Gandhian Oversight in Retrospect", 28 July 2021.
10. Roland E. Miller, Mappila Muslims of Kerala: A Study in Islamic Trends", Orient Longman, Madras, 1976.
11. K. K. N. Kurup, "Malabar Rebellion 1921", Yuvatha Book House, 2020.
12. Bipan Chandra, Mridula Mukherjee, Aditya Mukherjee, "India's Struggle for Independence", Penguin UK, 2016.
13. Hussain Randathani, "Mappila Muslims: A Study on their Political and Social Life", Other Books, 2007.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.